CENTRE FOR LAW & POLICY RESEARCH

Centre for Law & Policy Research (CLPR) is a not-for-profit organization dedicated to making the Constitution work for everyone through law and policy research, social and governance interventions and strategic impact litigation.

Transgender rights are at the forefront of gender inclusivity in India since the landmark decision of the Supreme Court in *NALSA* v. *Union of India*. These dialogues gained significant momentum when the Transgender Persons (Protection of Rights) Act, 2019 was enacted. Taking into consideration the vehement opposition to the legislation, CLPR held a community meeting "Conversations on Transgender Persons (Protection of Rights) Act, 2019" to discuss the legal issues and challenges to the law.

Through these discussions, CLPR recognised that the Act not being available in regional languages has created a barrier in terms of awareness and discourse. As we believe in complete dissemination of information, CLPR has translated the text into Kannada for wider dissemination among the local transgender community in Karnataka.

This translation is made in a private capacity by CLPR and is not an official version by any government.

ನೋಂದಾಯಿತ ಸಂಖ್ಯೆ. ಡಿಎಲ್–(ಎನ್)04/0007/2003–19

भारत का राजपत्र
The Gazette of India

ಅಸಾಧಾರಣ

ಭಾಗ 2 – ವಿಭಾಗ 1

ಪ್ರಾಧಿಕಾರದಿಂದ ಪ್ರಕಟಿಸಲಾಗಿದೆ

ಸಂ.64] ನವ ದೆಹಲಿ, ಗುರುವಾರ, 5ನೇ ಡಿಸೆಂಬರ್, 2019/ಅಗ್ರಹಾಯಣ 14,1941 (ಸಕ)

ಈ ಭಾಗವನ್ನು ಪ್ರತ್ಯೇಕ ಸಂಕಲನವಾಗಿ ಸಲ್ಲಿಸುವ ಸಲುವಾಗಿ ಪ್ರತ್ಯೇಕ ಪುಟಗಳನ್ನಾಗಿ ನೀಡಲಾಗಿದೆ.

**ಕಾನೂನು ಮತ್ತು ನ್ಯಾಯ ಸಚಿವಾಲಯ**
**(ಶಾಸಕಾಂಗ ಇಲಾಖೆ)**

**ನವ ದೆಹಲಿ, 5ನೇ ಡಿಸೆಂಬರ್, 2019/ಅಗ್ರಹಾಯಣ 14,1941 (ಸಕ)**

**ಸಂಸತ್ತಿನ ಈ ಕೆಳಗಿನ ಅಧಿನಿಯಮವು 5ನೇ ಡಿಸೆಂಬರ್, 2019 ರಂದು ರಾಷ್ಟ್ರಪತಿಗಳ ಅನುಮತಿಯನ್ನು ಪಡೆಯಿತು ಮತ್ತು ಸಾಮಾನ್ಯ ಮಾಹಿತಿಗಾಗಿ ಇದನ್ನು ಪ್ರಕಟಿಸಲಾಗಿದೆ :–**

# ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಅಧಿನಿಯಮ, 2019

**2019 ರ ಸಂಖ್ಯೆ 40**

[*5ನೇ ಡಿಸೆಂಬರ್, 2019.*]

ಈ ಅಧಿನಿಯಮವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳಿಗೆ ರಕ್ಷಣೆಯನ್ನು ಒದಗಿಸುವ ಮತ್ತು ಅವರ ಕಲ್ಯಾಣಕ್ಕಾಗಿ ಮತ್ತು ಸಂಬಂಧಿಸಿದ ಮತ್ತು ಪ್ರಾಸಂಗಿಕ ವಿಷಯಗಳಿಗೆ ಸಂಬಂಧಿಸಿದೆ.

*ಭಾರತ ಗಣರಾಜ್ಯವಾಗಿ* **ಎಪ್ಪತ್ತನೇ ವರ್ಷದಲ್ಲಿ** *ವರ್ಷದಲ್ಲಿ ಸಂಸತ್ತು ಜಾರಿಗೊಳಿಸಬೇಕಾಗಿರುವುದು ಈ ಕೆಳಗಿನಂತಿವೆ* **:–**

## ಅಧ್ಯಾಯ 1
## ಪ್ರಾರಂಭಿಕ

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.

**1.** (*1*) ಈ ಅಧಿನಿಯಮವನ್ನು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಅಧಿನಿಯಮ, 2019 ಎಂದು ಕರೆಯಬಹುದು.

(*2*) ಇದು ಇಡೀ ಭಾರತಕ್ಕೆ ವ್ಯಾಪ್ತಿ ಆಗತಕ್ಕದ್ದು

(*3*) ಇದು ಕೇಂದ್ರ ಸರ್ಕಾರವು ಅಧಿಕೃತ ಗಜೆಟ್ ಅಧಿಸೂಚನೆಯ ಮೂಲಕ ನೇಮಿಸಿದ ದಿನಾಂಕದಂದು ಜಾರಿಗೆ ಬರತಕ್ಕದು.

ವ್ಯಾಖ್ಯಾನಗಳು **2.** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದಿದ್ದರೆ, -

(*a*) "ಸಮುಚಿತ ಸರ್ಕಾರವೆಂದರೆ" –

(*i*) ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ಸಂಸ್ಥೆ ಪೂರ್ಣವಾಗಿ ಅಥವಾ ಗಣನೀಯವಾಗಿ ಆರ್ಥಿಕ ಸಹಾಯ ಒದಗಿಸಿದ ಆ ಸರ್ಕಾರ, ಕೇಂದ್ರ ಸರ್ಕಾರ;

(*ii*) ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ಸಂಸ್ಥೆ ಅಥವಾ ಸ್ಥಳೀಯ ಪ್ರಾಧಿಕಾರ ಪೂರ್ಣವಾಗಿ ಅಥವಾ ಗಣನೀಯವಾಗಿ ಆರ್ಥಿಕ ಸಹಾಯ ಒದಗಿಸಿದ ಆ ಸರ್ಕಾರ;

(*b*) "ಸ್ಥಾಪನೆ" ಎಂದರೆ" -

(*i*) ಯಾವುದೇ ಸ್ಥಾಪಿತ ನಿಕಾಯ ಅಥವಾ ಪ್ರಾಧಿಕಾರ ಅಥವಾ ಕೇಂದ್ರ ಅಧಿನಿಯಮದ ಅಥವಾ ರಾಜ್ಯ ಅಧಿನಿಯಮದ ಅಡಿಯಲ್ಲಿ ಅಥವಾ ಪ್ರಾಧಿಕಾರ ಅಥವಾ ಒಂದು ನಿಕಾಯವು ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಕಂಪೆನಿಗಳ ಅಧಿನಿಯಮ, 2013 ರ ಪರಿಚ್ಛೇದ 2 ರಲ್ಲಿ ವ್ಯಾಖ್ಯಾನಿಸಿದ ಸರ್ಕಾರದ ಕಂಪೆನಿಯು ಮಾಲೀಕತ್ವವಿದ್ದು ಅಥವಾ ನಿಯಂತ್ರಣದಲ್ಲಿ ಮತ್ತು ನೆರವು ನೀಡಿದ್ದಲ್ಲಿ ಮತ್ತು ಸರ್ಕಾರದ ಇಲಾಖೆಯನ್ನು ಒಳಗೊಂಡಲ್ಲಿ ಅಥವಾ 2013 ರಲ್ಲಿ 18

(*ii*) ಯಾವುದೇ ಕಂಪೆನಿ ಅಥವಾ ನಿಯಮಿತ ನಿಕಾಯ ಅಥವಾ ಸಂಸ್ಥೆ ಅಥವಾ ವ್ಯಕ್ತಿಗಳ ನಿಕಾಯ, ವ್ಯವಹಾರ ಸಂಸ್ಥೆ, ಸಹಕಾರಿ ಅಥವಾ ಇತರ ಸಂಸ್ಥೆ, ಸಂಘಟನೆ, ನ್ಯಾಸ, ಮಾರಾಳುತನ, ಪ್ರತಿಷ್ಠಾನ;

(*c*) "ಕುಟುಂಬ" ಅಂದರೆ ರಕ್ತ ಸಂಬಂಧದ ಅಥವಾ ವಿವಾಹ ಅಥವಾ ಕಾನೂನಾತ್ಮಕವಾಗಿ ದತ್ತು ತೆಗೆದುಕೊಂಡಿರುವ ಜನರ ಒಂದು ಗುಂಪು;

(*d*) "ಸಹಿತ ಶಿಕ್ಷಣ" ಅಂದರೆ ತಾರತಮ್ಯ, ನಿರ್ಲಕ್ಷ, ಕಿರುಕುಳ ಅಥವಾ ಬೆದರಿಕೆಯ ಭಯ ಇಲ್ಲದೇ, ಟ್ರಾನ್ಸ್‌ಜೆಂಡರ್ ವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳೊಂದಿಗೆ ಕಲಿಯುವ ಒಂದು ಶಿಕ್ಷಣ ವ್ಯವಸ್ಥೆಯಾಗಿದೆ ಮತ್ತು ಕಲಿಸುವ ಮತ್ತು ಕಲಿಯುವ ಇಂತಹ ವ್ಯವಸ್ಥೆಯು ಟ್ರಾನ್ಸ್‌ಜೆಂಡರ್ ವಿದ್ಯಾರ್ಥಿಗಳ ಕಲಿಕೆಯ ಅವಶ್ಯಕತೆಗಳನ್ನು ಒದಗಿಸುವ ರೀತಿಯಲ್ಲಿ ಅಳವಡಿಸಿಕೊಂಡಿರಬೇಕು;

(*e*) "ಸಂಸ್ಥೆ" ಅಂದರೆ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸಂಸ್ಥೆಯು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಗ್ರಹಿಸುವ, ಆರೈಕೆ, ರಕ್ಷಣೆ, ಶಿಕ್ಷಣ, ತರಬೇತಿ, ಅಥವಾ ಇತರ ಸೇವೆಗಳನ್ನು ನೀಡಲು ಇರುವ ಸಂಸ್ಥೆ;

(*f*) "ಸ್ಥಳೀಯ ಪ್ರಾಧಿಕಾರ" ಅಂದರೆ ನಗರ ನಿಗಮ, ನಗರ ಪಾಲಿಕೆ ಅಥವಾ ಪಂಚಾಯತಿ ಅಥವಾ ಈ ಸಂದರ್ಭದಲ್ಲಿ ಜಾರಿಯಲ್ಲಿರುವ ಕಾನೂನಿನ ಮತ್ತು ಅದರ ಕಾರ್ಯ ವ್ಯಾಪ್ತಿಯ ಅಡಿಯಲ್ಲಿ ಇತರ ಯಾವುದೇ ಸ್ಥಾಪಿತ ಸ್ಥಳೀಯ ನಿಕಾಯವು ಸಂದರ್ಭಕ್ಕೆ ತಕ್ಕ ಸೇವೆಗಳಾದ ಸ್ಥಳೀಯ ಸೇವೆಗಳನ್ನು ಅಥವಾ ಮೂಲಭೂತ ಸೇವೆಗಳನ್ನು ನೀಡಲು ಸ್ಥಾಪಿತ ಸ್ಥಳೀಯ ಪ್ರಾಧಿಕಾರ ಆಗಿರುತ್ತದೆ.

(*g*) "ರಾಷ್ಟ್ರೀಯ ಪರಿಷತ್ತು" ಅಂದರೆ ಪರಿಚ್ಛೇದ 16 ರ ಅಡಿಯಲ್ಲಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗಾಗಿ ಸ್ಥಾಪಿಸಿರುವ ರಾಷ್ಟ್ರೀಯ ಪರಿಷತ್ತು;

(*h*) "ಅಧಿಸೂಚನೆ" ಅಂದರೆ ಅಧಿಕೃತ ಗಜೆಟ್‌ನಲ್ಲಿ ಮುದ್ರಿಸಿದ ಅಧಿಕೃತ ಅಧಿಸೂಚನೆ;

(*i*) "ಅಂತರ್ಲಿಂಗೀ ವ್ಯತ್ಯಾಸಗಳನ್ನು ಹೊಂದಿರುವ ವ್ಯಕ್ತಿಗಳು" ಅಂದರೆ ಒಬ್ಬ ವ್ಯಕ್ತಿಯು ತನ್ನ ಜನನದ ಸಂದರ್ಭದಲ್ಲಿ ಅವನ ಅಥವಾ ಅವಳ ಪ್ರಾಥಮಿಕ ಲೈಂಗಿಕ ಗುಣಲಕ್ಷಣಗಳಲ್ಲಿ, ಬಾಹ್ಯ ಜನನಾಂಗದಲ್ಲಿ, ಹಾರ್ಮೋನ್‌ಗಳಲ್ಲಿ ಅಥವಾ ಪುರುಷ ಅಥವಾ ಸ್ತ್ರೀ ದೇಹದಲ್ಲಿ ಇರಬೇಕಾದ ಹಾರ್ಮೋನ್‌ಗಳ ಸಾಮಾನ್ಯ ಮಾನದಂಡಗಳಲ್ಲಿ ವ್ಯತ್ಯಾಸವನ್ನು ಹೊಂದಿರುವುದು;

(*j*) "ನಿಗದಿಪಡಿಸಿದ" ಅಂದರೆ ಈ ಅಧಿನಿಯಮದ ಅಡಿಯಲ್ಲಿ ಸಮುಚಿತ ಸರ್ಕಾರವು ನಿಗದಿಪಡಿಸಿದ ನಿಯಮಾವಳಿಗಳು; ಮತ್ತು

(*k*) "ಟ್ರಾನ್ಸ್‌ಜೆಂಡರ್ ವ್ಯಕ್ತಿ "ಅಂದರೆ 'ಒಬ್ಬ ವ್ಯಕ್ತಿ' ಯಾರ ಲಿಂಗವು ಅವರ ಜನನದ ಸಮಯದಲ್ಲಿ ನೇಮಿಸಿದ ಲಿಂಗದೊಂದಿಗೆ ಹೋಲಿಕೆಯಾಗದ ಸಂದರ್ಭವಿದ್ದು ಮತ್ತು ಟ್ರಾನ್ಸ್ – ಪುರುಷ ಅಥವಾ ಟ್ರಾನ್ಸ್ – ಮಹಿಳೆ (ಲಿಂಗ ಬದಲಾವಣೆಯ ಶಸ್ತ್ರ ಚಿಕಿತ್ಸೆಗೆ ಅಥವಾ ಹಾರ್ಮೋನ್ ಚಿಕಿತ್ಸೆಗೆ ಅಥವಾ ಲೇಸರ್ ಚಿಕಿತ್ಸೆಗೆ ಅಥವಾ ಇನ್ನಾವುದೇ ಚಿಕಿತ್ಸೆಗೆ ಒಳಪಟ್ಟ ಅಥವಾ ಒಳಪಡದೇ ಇರುವ ವ್ಯಕ್ತಿ), ಅಂತರ್ಲಿಂಗೀಯ ವ್ಯತ್ಯಾಸಗಳುಳ್ಳ ವ್ಯಕ್ತಿ, ಜೆಂಡರ್ ಕ್ವ್ಯೂಯಿರ್ ಮತ್ತು ಕಿನ್ನರ್, ಹಿಜ್ರಾ, ಅರವಾಣಿ ಮತ್ತು ಜೋಗ್ತಾ ಆಗಿ ಸಾಮಾಜಿಕ – ಸಾಂಸ್ಕೃತಿಕವಾಗಿ ಗುರುತಿಸಿಕೊಳ್ಳುವ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ.

## ಅಧ್ಯಾಯ 2
## ತಾರತಮ್ಯದ ವಿರುದ್ಧ ನಿಷೇಧ

ತಾರತಮ್ಯದ ವಿರುದ್ಧ ನಿಷೇಧ **3.** ಯಾವುದೇ ವ್ಯಕ್ತಿ ಅಥವಾ ಸ್ಥಾಪನೆಯು ಟ್ರಾನ್ಸ್‌ಜೆಂಡರ್ ವ್ಯಕ್ತಿಯ ವಿರುದ್ಧ ಈ ಕೆಳಗಿನ ಆಧಾರದ ಮೇಲೆ ತಾರತಮ್ಯ ಮಾಡಬಾರದು :–

(*a*) ಶಿಕ್ಷಣ ಸಂಸ್ಥೆಗಳು ಮತ್ತು ಇವುಗಳ ಸೇವೆಗಳನ್ನು ನಿರಾಕರಿಸುವುದು, ನಿಲ್ಲಿಸುವುದು ಅಥವಾ ಅಹಿತಕರವಾಗಿ ವರ್ತಿಸುವುದು;

(*b*) ಉದ್ಯೋಗ ಅಥವಾ ಕೆಲಸದಲ್ಲಿ ಅಥವಾ ಕೆಲಸಕ್ಕೆ ಸಂಬಂಧಿಸಿದಂತೆ ಅಹಿತಕರವಾಗಿ ವರ್ತಿಸುವುದು;

(*c*) ಉದ್ಯೋಗ ಅಥವಾ ಕೆಲಸವನ್ನು ನಿರಾಕರಿಸುವುದು ಅಥವಾ ಕೆಲಸದಿಂದ ಮುಕ್ತಾಯ;

(*d*) ಆರೋಗ್ಯ ಆರೈಕೆ ಸೇವೆಗಳನ್ನು ನಿರಾಕರಿಸುವುದು ಅಥವಾ ಸ್ಥಗಿತಗೊಳಿಸುವುದು ಅಥವಾ ಅಹಿತಕರವಾಗಿ ವರ್ತಿಸುವುದು;

(*e*) ಯಾವುದೇ ಸರಕುಗಳ ಬಳಕೆ, ವಸತಿ, ಸೇವೆಗಳನ್ನು, ಸೌಲಭ್ಯಗಳನ್ನು, ಲಾಭ, ಸೌಕರ್ಯ ಜನ ಸಾಮಾನ್ಯರಿಗೆ ಬಳಸಲು ಮೀಸಲಿಟ್ಟ ಅಥವಾ ಸಾರ್ವಜನಿಕರಿಗೆ ಸಾಂಪ್ರದಾಯಿಕವಾಗಿ ಲಭ್ಯ ಇರುವ ಅವಕಾಶಗಳನ್ನು ಪ್ರವೇಶಿಸುವ ಅಥವಾ ಪಡೆಯುವ ಅಥವಾ ಆನಂದಿಸುವ ಸಂದರ್ಭದಲ್ಲಿ ಇವುಗಳನ್ನು ನಿರಾಕರಿಸುವುದು ಅಥವಾ ಸ್ಥಗಿತಗೊಳಿಸುವುದು ಅಥವಾ ಅಹಿತಕರವಾಗಿ ವರ್ತಿಸುವುದು;

(*f*) ಚಳುವಳಿ ನಡೆಸುವ ಹಕ್ಕನ್ನು ನಿರಾಕರಿದ್ದಲ್ಲಿ ಅಥವಾ ಸ್ಥಗಿತಗೊಳಿಸಿದ್ದಲ್ಲಿ ಅಥವಾ ಅಹಿತಕರವಾಗಿ ವರ್ತಿಸಿದ್ದಲ್ಲಿ;

(*g*) ಆಸ್ತಿಯನ್ನು ಖರೀದಿಸುವ, ವಾಸಿಸುವ, ಬಾಡಿಗೆಗೆ ಪಡೆಯಲು ಅಥವಾ ಅನ್ಯಥಾ ಒಕ್ಕಲಿರುವ ಹಕ್ಕನ್ನು ನಿರಾಕರಿದ್ದಲ್ಲಿ ಅಥವಾ ಸ್ಥಗಿತಗೊಳಿಸಿದ್ದಲ್ಲಿ ಅಥವಾ ನಡೆಸುವಾಗ ಅಹಿತಕರವಾಗಿ ವರ್ತಿಸಿದ್ದಲ್ಲಿ;

(*h*) ಯಾವುದೇ ಸಾರ್ವಜನಿಕ ಅಥವಾ ಖಾಸಗೀ ಕಚೇರಿಯಲ್ಲಿ ನಿಲ್ಲುವ ಅಥವಾ ಪಡೆಯುವ ಅವಕಾಶವನ್ನು ನಿರಾಕರಿಸಿದ್ದಲಿ ಅಥವಾ ಸ್ಥಗಿತಗೊಳಿಸಿದ್ದಲ್ಲಿ ಅಥವಾ ನಡೆಸುವಾಗ ಅಹಿತಕರವಾಗಿ ವರ್ತಿಸಿದ್ದಲ್ಲಿ; ಮತ್ತು

(*i*) ಯಾವುದೇ ಸರ್ಕಾರಿ ಅಥವಾ ಖಾಸಗೀ ಸ್ಥಾಪನೆಯ ಆರೈಕೆ ಮತ್ತು ಆಧೀನದಲ್ಲಿ ಅಥವಾ ಸಂರಕ್ಷಣೆಯಲ್ಲಿರುವ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಪ್ರವೇಶ ಅವಕಾಶವನ್ನು ನಿರಾಕರಿಸುವುದು, ತೆಗೆದು ಹಾಕುವುದು ಅಥವಾ ಅಹಿತಕರವಾಗಿ ವರ್ತಿಸುವುದು.

## ಅಧ್ಯಾಯ 3

## ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಗುರುತಿನ ಮಾನ್ಯತೆ

**4.** (*1*) ಈ ಅಧಿನಿಯಮದ ಉಪ ನಿಬಂಧನೆಗಳಲ್ಲಿ ಅನುಸಾರವಾಗಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗೆ ಅವರ ಗುರುತಿನ ಮಾನ್ಯತೆಯ ಹಕ್ಕುಗಳು ಇರುತ್ತದೆ. ಟ್ರಾನ್ಸ್‌ಜೆಂಡರ್ ವ್ಯಕ್ತಿ ಗುರುತಿಸುವಿಕೆಗೆ ಮಾನ್ಯತೆ.

(*2*) ಈ ಅಧಿನಿಯಮದ ಉಪ-ಪರಿಛೇದ (1) ಅಡಿಯಲ್ಲಿ ಯಾವ ವ್ಯಕ್ತಿ ಟ್ರಾನ್ಸ್‌ಜೆಂಡರ್ ಎಂದು ಅಂಗೀಕರಿಸಿದ್ದಲ್ಲಿ, ಅವರಿಗೆ ತನ್ನ ಲಿಂಗ ಗುರುತಿಸುವಿಕೆಯ ಸ್ವಯಂ ಘೋಷಿಸುವ ಹಕ್ಕು ಇರುತ್ತದೆ.

**5.** ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಯು ಜಿಲ್ಲಾ ನ್ಯಾಯಾಧೀಶರೊಂದಿಗೆ ತಾನು ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿ ಎಂದು ಗುರುತಿನ ಪ್ರಮಾಣ ಪತ್ರವನ್ನು ಪಡೆಯಲು, ನಮೂದಿಸಿರುವ ರೀತಿಯಲ್ಲಿ ಮತ್ತು ಪ್ರಕಾರದ ಮುಖಾಂತರ ಸಂಬಂಧ ಪಟ್ಟ ದಾಖಲೆಗಳನ್ನು ಲಗತ್ತಿಸಿ ಗುರುತಿನ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು: ಗುರುತಿನ ಪ್ರಮಾಣ ಪತ್ರಕ್ಕೆ ಅರ್ಜಿ

ಈ ವಕ್ತಿಯು ಅಪ್ರಾಪ್ತ ವಯಸ್ಸಿನ ಮಗುವಾಗಿದ್ದಲ್ಲಿ ಆ ಮಗುವಿನ ಹೆತ್ತವರು ಅಥವಾ ಪೋಷಕರು ಗುರುತಿನ ಪ್ರಮಾಣ ಪತ್ರಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

**6.** (*1*) ಜಿಲ್ಲಾ ನ್ಯಾಯಾಧೀಶರು ಪರಿಛೇದ 5 ಅಡಿಯಲ್ಲಿ ತಿಳಿಸಿರುವಂತೆ ನಮೂದಿಸಿರುವ ಅಧಿನಿಯಮ ಕ್ರಮ ಮತ್ತು ರೀತಿ ಮತ್ತು ಪ್ರಕಾರವನ್ನು ಪಾಲನೆ ಮಾಡಿ ನಿಗದಿತ ಸಮಯದ ಒಳಗೆ ಅಂತಹ ಪ್ರಕ್ರಿಯೆಗಳನ್ನು ಅನುಸರಿಸುವ ಮುಖಾಂತರ ವ್ಯಕ್ತಿಯು ಟ್ರಾನ್ಸ್‌ಜೆಂಡರ್ ವ್ಯಕ್ತಿ ಎಂದು ಅವರ ಲಿಂಗವನ್ನು ಸೂಚಿಸಿ ಟ್ರಾನ್ಸ್‌ಜೆಂಡರ್ ವ್ಯಕ್ತಿ ಎಂದು ಗುರುತಿನ ಪ್ರಮಾಣ ಪತ್ರವನ್ನು ನೀಡಬೇಕು. ಗುರುತಿನ ಪ್ರಮಾಣ ಪತ್ರದ ನೀಡಿವಿಕೆ.

(*2*) ಟ್ರಾನ್ಸ್‌ಜೆಂಡರ್ ವ್ಯಕ್ತಿಯ ಲಿಂಗದ ಬಗ್ಗೆ ಅಧಿನಿಯಮದ ಉಪ-ಪರಿಛೇದ (1) ಅಡಿಯಲ್ಲಿ ನೀಡಿದ ಗುರುತಿನ ಪ್ರಮಾಣ ಪತ್ರದಲ್ಲಿ ಸೂಚಿಸಿರುವ ಅನುಸಾರವಾಗಿ ಎಲ್ಲಾ ಅಧಿಕೃತ ದಾಖಲೆಗಳಲ್ಲಿ ದಾಖಲಿಸಬೇಕು.

(*3*) ಅಧಿನಿಯಮದ ಉಪ-ಪರಿಛೇದ (1) ಅಡಿಯಲ್ಲಿ ನೀಡಿರುವ ಗುರುತಿನ ಪ್ರಮಾಣ ಪತ್ರವು ಆ ವ್ಯಕ್ತಿಗೆ ಹಕ್ಕುಗಳನ್ನು ಅನುಗ್ರಹಿಸುತ್ತದೆ ಮತ್ತು ಟ್ರಾನ್ಸ್‌ಜೆಂಡರ್ ವ್ಯಕ್ತಿ ಮಾನ್ಯತೆ ನೀಡುವ ಪ್ರಮಾಣವಾಗುತ್ತದೆ ಮತ್ತು ಅವರಿಗೆ ಎಲ್ಲಾ ಹಕ್ಕುಗಳನ್ನು ನೀಡುತ್ತದೆ.

ಲಿಂಗದಲ್ಲಿ ಬದಲಾವಣೆ.

**7.** (*1*) ಈ ಅಧಿನಿಯಮದ ಪರಿಛೇದ 6 ರ ಉಪ–ಪರಿಛೇದ (1) ರ ಅಡಿಯಲ್ಲಿ, ಒಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಯು ತನ್ನ ಲಿಂಗವನ್ನು ಪುರುಷ ಅಥವಾ ಸ್ತ್ರೀಯ ಲಿಂಗಕ್ಕೆ ಬದಲಾವಣೆಯ ಶಸ್ತ್ರ ಚಿಕಿತ್ಸೆಗೆ ಮಾಡಿಸಿಕೊಂಡಲ್ಲಿ, ಅಂತಹ ವ್ಯಕ್ತಿಯು ತಾನು ಈ ಮುಂಚೆ ಶಸ್ತ್ರ ಚಿಕಿತ್ಸೆಗೆ ಮಾಡಿಸಿಕೊಂಡ ವೈದ್ಯಕೀಯ ಸಂಸ್ಥೆಯ ವೈದ್ಯಕೀಯ ಮೇಲ್ವಿಚಾರಕರು ಅಥವಾ ಮುಖ್ಯ ವೈದ್ಯಕೀಯ ಅಧಿಕಾರಿಗಳು ನೀಡಿದ ಪ್ರಮಾಣ ಪತ್ರವನ್ನು ಲಿಂಗ ಬದಲಾವಣೆಗೆ ಸಂಬಂಧಿಸಿದ ನಿಗದಿತ ಅರ್ಜಿಯೊಂದಿಗೆ ಲಗತ್ತಿಸಿ ನಿಗದಿತ ರೀತಿ ಮತ್ತು ಪ್ರಕಾರ ನ್ಯಾಯಾಧೀಶರ ಸಮ್ಮುಖದಲ್ಲಿ ಪರಿಷ್ಕೃತ ಗುರುತಿನ ಪ್ರಮಾಣ ಪತ್ರಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(*2*) ಜಿಲ್ಲಾ ನ್ಯಾಯಾಧೀಶರು ಪಡೆದ ಲಿಂಗ ಬದಲಾವಣೆಯ ಕುರಿತು ಸಲ್ಲಿಸಿದ ಅರ್ಜಿಯೊಂದಿಗೆ ಲಗತ್ತಿಸಿದ ವೈದ್ಯಕೀಯ ಮೇಲ್ವಿಚಾರಕರು ಅಥವಾ ಮುಖ್ಯ ವೈದ್ಯಕೀಯ ಅಧಿಕಾರಿಗಳು ನೀಡಿದ ಪ್ರಮಾಣ ಪತ್ರವನ್ನು ಗುರುತಿನ ಪ್ರಮಾಣ ಪತ್ರವನ್ನು ಪರಿಷ್ಕರಿಸುವುದು ಸಮಂಜಸ ಎಂದು ಅವರಿಗೆ ಅನಿಸಿದ್ದಲ್ಲಿ ನಮೂದಿಸಿದ ನಮೂನೆ ಮತ್ತು ಪ್ರಕ್ರಿಯೆಯ ಮುಖಾಂತರ ನಿಗದಿತ ಸಮಯದ ಒಳಗೆ ಲಿಂಗದಲ್ಲಿನ ಬದಲಾವಣೆಯನ್ನು ಸೂಚಿಸಿ ನಮೂದಿಸಿರುವ ಅಧಿನಿಯಮ ಕ್ರಮ ಮತ್ತು ರೀತಿ ಮತ್ತು ಪ್ರಕಾರವನ್ನು ಪಾಲನೆ ಮಾಡಿ ಪತ್ರವನ್ನು ನೀಡಬೇಕು.

(3) ಪರಿಛೇದ 6 ಅಡಿಯಲ್ಲಿ ಪಡೆದ ಗುರುತಿನ ಪ್ರಮಾಣ ಪತ್ರವನ್ನು ಅಥವಾ ಉಪ–ಪರಿಛೇದ (2) ರ ಅಡಿಯಲ್ಲಿ ಪಡೆದ ಪರಿಷ್ಕೃತ ಗುರುತಿನ ಪ್ರಮಾಣ ಪತ್ರವನ್ನು ಪಡೆದ ವ್ಯಕ್ತಿಯು ತನ್ನ ಜನನ ಪ್ರಮಾಣ ಪತ್ರದಲ್ಲಿ ಮೊದಲ ಹೆಸರನ್ನು ಬದಲಾಯಿಸಲು ಮತ್ತು ಅಂತಹ ವ್ಯಕ್ತಿಯ ಗುರುತಿಸುವಿಕೆಗೆ ಸಂಬಂಧಿಸಿದ ಇತರ ಎಲ್ಲಾ ಅಧಿಕೃತ ದಾಖಲೆಗಳಲ್ಲಿ ಬದಲಾಯಿಸಲು ಅರ್ಹರಾಗಿರುತ್ತಾರೆ:

ಲಿಂಗ ಬದಲಾವಣೆಯ ಬಗ್ಗೆ ಮತ್ತು ಉಪ–ಪರಿಛೇದ (2) ಅಡಿಯಲ್ಲಿ ನೀಡಿರುವ ಪರಿಷ್ಕೃತ ಗುರುತಿನ ಪ್ರಮಾಣ ಪತ್ರದಿಂದಾಗಿ ಈ ಅಧಿನಿಯಮದ ಅಡಿಯಲ್ಲಿ ಆ ವ್ಯಕ್ತಿಗೆ ಇರುವ ಹಕ್ಕುಗಳ ಮತ್ತು ಅರ್ಹತೆಗಳ ಮೇಲೆ ಯಾವುದೇ ತೊಂದರೆಗಳನ್ನು ಬೀರುವುದಿಲ್ಲ.

## ಅಧ್ಯಾಯ 4

## ಸರ್ಕಾರದಿಂದ ಕಲ್ಯಾಣ ಕ್ರಮಗಳು

ಸೂಕ್ತ ಸರ್ಕಾರದ ಕಟ್ಟುಪಾಡುಗಳು.

**8.** (*1*) ಸಮುಚಿತ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಸಮಾಜದಲ್ಲಿ ಸೇರ್ಪಡೆಗೊಳ್ಳುವುದನ್ನು ಮತ್ತು ಅವರು ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಭಾಗವಹಿಸುವುದನ್ನು ಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು.

(2) ಸಮುಚಿತ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ಮತ್ತು ಅವರ ಆಸಕ್ತಿಗಳ ರಕ್ಷಣೆಗೆ ಸೂಚಿಸಿರುವ ನಿಗದಿತ ಕಲ್ಯಾಣ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಸರ್ಕಾರ ರೂಪಿಸಿರುವ ಕಲ್ಯಾಣ ಯೋಜನೆಗಳನ್ನು ಅವರು ಪಡೆಯುವಂತೆ ಸರಾಗ ಮಾಡಬೇಕು.

(*3*) ಸಮುಚಿತ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಬಗ್ಗೆ ಸಂವೇದಿತವಾಗಿ ಇರುವ ಮತ್ತು ಕಳಂಕ–ರಹಿತ ಮತ್ತು ತಾರತಮ್ಯ–ರಹಿತ ಕಲ್ಯಾಣ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಬೇಕು.

(*4*) ಸಮುಚಿತ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳನ್ನು ಕಾಪಾಡುವ, ಅವರನ್ನು ರಕ್ಷಿಸುವ ಮತ್ತು ಅವರಿಗೆ ಪುನರ್ವಸತಿಯನ್ನು ಕಲ್ಪಿಸುವ ಮತ್ತು ಇಂತಹ ವ್ಯಕ್ತಿಗಳ ಅವಶ್ಯಕತೆಗಳನ್ನು ಪೂರೈಸಬೇಕು.

(*5*) ಸಮುಚಿತ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಸಾಂಸ್ಕೃತಿಕ ಮತ್ತು ಮನೋರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹಕ್ಕುಗಳನ್ನು ರಕ್ಷಿಸುವ ಮತ್ತು ಪ್ರೋತ್ಸಾಹಿಸುವ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

## ಅಧ್ಯಾಯ 5

## ಸ್ಥಾಪಿತ ನಿಕಾಯಗಳಿಗೆ ಮತ್ತು ಇತರ ವ್ಯಕ್ತಿಗಳಿಗೆ ಸಂಬಂಧಿಸಿದ ಕಟ್ಟುಪಾಡುಗಳು

ತಾರತಮ್ಯ–ರಹಿತ ಉದ್ಯೋಗ.

**9.** ಯಾವುದೇ ಸಂಸ್ಥೆಯು ಯಾವುದೇ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ವಿರುದ್ಧ ಅವರ ಉದ್ಯೋಗಕ್ಕೆ ಸಂಬಂಧಿಸಿದ ವಿಷಯಗಳಾದ ಯಾವುದೇ ನೇಮಕಾತಿ, ಪದೋನ್ನತಿ ಮತ್ತು ಇತರ ಸಂಬಂಧಿತ ವಿಷಯಗಳಲ್ಲಿ ತಾರತಮ್ಯವನ್ನು ಮಾಡಬಾರದು.

ಸ್ಥಾಪಿತ ನಿಕಾಯಗಳಿಗೆ ಕಟ್ಟುಪಾಡುಗಳು.

**10.** ಎಲ್ಲಾ ಸ್ಥಾಪಿತ ನಿಕಾಯಗಳು ಈ ಅಧಿನಿಯಮದ ನಿಬಂಧನೆಗಳನ್ನು ಪಾಲಿಸಬೇಕು ಮತ್ತು ಈ ಅಧಿನಿಯಮದ ನಿಗದಿತ ನಿಬಂಧನೆಗಳಂತೆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಅನುಕೂಲಗಳನ್ನು ಕಲ್ಪಿಸಬೇಕು.

ದೂರು ಪರಿಹಾರ ವ್ಯವಸ್ಥೆ

**11.** ಪ್ರತೀ ಸ್ಥಾಪಿತ ನಿಕಾಯಗಳಲ್ಲಿ ಈ ಅಧಿನಿಯಮದ ನಿಬಂಧನೆಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ನಿಭಾಯಿಸಲು ಒಬ್ಬ ವ್ಯಕ್ತಿಯನ್ನು ದೂರು ಅಧಿಕಾರಿಯಾಗಿ ನೇಮಿಸಬೇಕು.

ವಾಸಿಸುವ ಹಕ್ಕು

**12.** (*1*) ತಕ್ಕ ನ್ಯಾಯಾಲ ಮಗುವಿನ ಕಾಳಜಿಗಳ ಬಗ್ಗೆ ನೀಡಿದ ಆದೇಶವನ್ನು ಹೊರತು ಪಡಿಸಿ, ಯಾವುದೇ ಮಗುವನ್ನು ಅವರು ಒಬ್ಬ ಟ್ರಾನ್ಸ್‌ಜೆಂಡರ್ ಎಂಬ ಕಾರಣಕ್ಕಾಗಿ ಹೆತ್ತವರಿಂದ ಅಥವಾ ಹತ್ತಿರದ ಕುಟುಂಬದಿಂದ ಅವರನ್ನು ಬೇರ್ಪಡಿಸುವಂತಿಲ್ಲ.

(*2*) ಪ್ರತಿಯೊಬ್ಬ ಟ್ರಾನ್ಸ್‌ಜೆಂಡರ್ ವ್ಯಕ್ತಿಗೆ ಈ ಕೆಳಗಿನ ಹಕ್ಕುಗಳು ಇರುತ್ತವೆ –

(*a*) ಹೆತ್ತವರು ಅಥವಾ ಹತ್ತಿರದ ಕುಟುಂಬದವರು ವಾಸಿಸುವ ಮನೆಯಲ್ಲಿ ವಾಸಿಸಲು ಹಕ್ಕು;

(*b*) ಇಂತಹ ಮನೆ ಅಥವಾ ಮನೆಯ ಭಾಗದಿಂದ ಅವರನ್ನು ಬಹಿಷ್ಕರಿಸುವ ಹಕ್ಕುಗಳು ಇರುವುದಿಲ್ಲ; ಮತ್ತು

(*c*) ಇಂತಹ ಮನೆಯ ಸೌಲಭ್ಯಗಳನ್ನು ತಾರತಮ್ಯ–ರಹಿತ ರೀತಿಯಲ್ಲಿ ಬಳಸುವ ಮತ್ತು ಆನಂದಿಸುವ ಹಕ್ಕುಗಳು ಇರುತ್ತದೆ.

(*3*) ಟ್ರಾನ್ಸ್‌ಜೆಂಡರ್ ವ್ಯಕ್ತಿಯ ಹೆತ್ತವರು ಅಥವಾ ಕುಟುಂಬದ ಹತ್ತಿರದ ಸಂಬಂಧಿಕರು ಇವರ ಆರೈಕೆಯನ್ನು ಮಾಡಲು ಆಗದಿದ್ದಲ್ಲಿ ತಕ್ಕ ನ್ಯಾಯಾಲಯ ಅಂತಹ ಟ್ರಾನ್ಸ್‌ಜೆಂಡರ್ ವ್ಯಕ್ತಿಯನ್ನು ಪುನರ್ವಸತಿ ಕೇಂದ್ರದಲ್ಲಿ ಇಡುವಂತೆ ಆದೇಶವನ್ನು ನೀಡಬಹುದು.

## ಅಧ್ಯಾಯ 6

## ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಶಿಕ್ಷಣ, ಸಾಮಾಜಿಕ ಭದ್ರತೆ ಮತ್ತು ಆರೋಗ್ಯ

ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಅಂತರ್ಗತ ಶಿಕ್ಷಣವನ್ನು ನೀಡಲು ಶಿಕ್ಷಣ ಸಂಸ್ಥೆಗಳಿಗೆ ಕಟ್ಟುಪಾಡುಗಳು

**13.** ಸಮುಚಿತ ಸರ್ಕಾರದಿಂದ ಧನ ಸಹಾಯ ಪಡೆಯುವ ಅಥವಾ ಮಾನ್ಯತೆ ಪಡೆದ ಎಲ್ಲಾ ಶಿಕ್ಷಣ ಸಂಸ್ಥೆಗಳು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳನ್ನು ಸೇರಿಸಿ ಅಂತರ್ಗತ ಶಿಕ್ಷಣವನ್ನು ನೀಡಬೇಕು ಮತ್ತು ಕ್ರೀಡೆ, ಮನೋರಂಜನೆ ಮತ್ತು ವಿಶ್ರಾಂತಿ ಕಾರ್ಯಕ್ರಮಗಳನ್ನು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೂ ಸಮಾನವಾಗಿ ಮತ್ತು ತಾರತಮ್ಯವಿಲ್ಲದ ರೀತಿಯಲ್ಲಿ ದೊರಕುವಂತೆ ಮಾಡಬೇಕು.

ವೃತ್ತಿಪರ ತರಬೇತಿ ಮತ್ತು ಸ್ವ–ಉದ್ಯೋಗ

**14.** ಸಮುಚಿತ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗಾಗಿ ಕಲ್ಯಾಣ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅವರ ಜೀವನೋಪಾಯನ್ನು ಸುಗಮಗೊಳಿಸುವ ಮತ್ತು ಬೆಂಬಲ ನೀಡುವ ಉದ್ದೇಶದಿಂದ ವೃತ್ತಿಪರ ತರಬೇತಿ ಮತ್ತು ಸ್ವ–ಉದ್ಯೋಗದ ಮುಖಾಂತರ ಸಹಾಯ ಮಾಡಲು ರೂಪಿಸಬೇಕು.

**15.** ಸಮುಚಿತ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು –

ಆರೋಗ್ಯ ಆರೈಕೆ ಸೌಲಭ್ಯಗಳು

(*a*) ರಾಷ್ಟ್ರೀಯ ಏಡ್ಸ್ ನಿಯಂತ್ರಣ ಮಂಡಳಿಯು ಸೆರೋ–ಸರ್ವೇಲೆನ್ಸ್ ತಪಾಸಣೆಗೆ ಸಂಬಂಧಿಸಿದಂತೆ ನೀಡಿದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಇರುವಂತೆ ಹ್ಯೂಮನ್ ಇಮ್ಯೂನೋಡೆಫಿಶಿಯೆನ್ಸಿ ವೈರಸ್ ಸೆರೋ–ಸರ್ವೇಲೆನ್ಸ್ ಕೇಂದ್ರಗಳನ್ನು ಇಂತಹ ವ್ಯಕ್ತಿಗಳಿಗೆ ತಪಾಸಣೆಯನ್ನು ನಡೆಸಲು ಪ್ರತ್ಯೇಕವಾಗಿ ಸ್ಥಾಪಿಸಬೇಕು.

(*b*) ಲಿಂಗ ಬದಲಾವಣೆ ಶಸ್ತ್ರ ಚಿಕಿತ್ಸೆ ಮತ್ತು ಹಾರ್ಮೋನ್ ಚಿಕಿತ್ಸೆಗಳನ್ನು ಒಳಗೊಂಡಂತೆ ವೈದ್ಯಕೀಯ ಆರೈಕೆಯ ಸೌಲಭ್ಯಗಳನ್ನು ಅವರಿಗೆ ಒದಗಿಸಬೇಕು;

(*c*) ಲಿಂಗ ಬದಲಾವಣೆ ಶಸ್ತ್ರ ಚಿಕಿತ್ಸೆ ಮತ್ತು ಹಾರ್ಮೋನ್ ಚಿಕಿತ್ಸೆಗಳನ್ನು ಪ್ರಾರಂಭಿಸುವ ಮೊದಲು ಮತ್ತು ಚಿಕಿತ್ಸೆಯ ನಂತರ ಅವರಿಗೆ ಆಪ್ತ ಸಮಾಲೋಚನೆಯನ್ನು ನೀಡಬೇಕು;

(*d*) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಆರೋಗ್ಯಕ್ಕಾಗಿ ವಿಶ್ವ ವೃತ್ತಿಪರ ಸಂಸ್ಥೆಯ ಮಾರ್ಗಸೂಚಿಗಳ ಪ್ರಕಾರ ಲಿಂಗ ಬದಲಾವಣೆ ಶಸ್ತ್ರ ಚಿಕಿತ್ಸೆಗೆ ಸಂಬಂಧ ಪಟ್ಟ ವಿಷಯಗಳ ಆರೋಗ್ಯ ಕೈಪಿಡಿಯನ್ನು ತಯಾರಿಸಬೇಕು;

(*e*) ವೈದ್ಯರು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ನಿರ್ದಿಷ್ಟವಾದ ಆರೋಗ್ಯ ಸಮಸ್ಯೆಗಳನ್ನು ಉದ್ದೇಶಿಸಲು ವೈದ್ಯಕೀಯ ಪಠ್ಯಕ್ರಮಗಳ ಮತ್ತು ಅಧ್ಯಯನಗಳ ವಿಮರ್ಶೆ ಮಾಡಬೇಕು.

(*f*) ಆಸ್ಪತ್ರೆಗಳಲ್ಲಿ ಮತ್ತು ಇತರ ಆರೋಗ್ಯ ಆರೈಕೆ ಸಂಸ್ಥೆಗಳಲ್ಲಿ ಮತ್ತು ಕೇಂದ್ರಗಳಲ್ಲಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಸೇವೆಗಳನ್ನು ಪಡೆಯುವಲ್ಲಿ ಅವಕಾಶ ಮಾಡಿಕೊಳ್ಳಬೇಕು;

(*g*) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಲಿಂಗ ಬದಲಾವಣೆಯ ಶಸ್ತ್ರ ಚಿಕಿತ್ಸೆ, ಹಾಮೋನ್ ಚಿಕಿತ್ಸೆ, ಲೇಸರ್ ಚಿಕಿತ್ಸೆ ಅಥವಾ ಇನ್ನಾವುದೇ ಇತರ ಆರೋಗ್ಯ ಸಮಸ್ಯೆಗಳನ್ನು ಒಳಗೊಂಡಂತೆ ಎಲ್ಲಾ ವೈದ್ಯಕೀಯ ವೆಚ್ಚಗಳನ್ನು ವ್ಯಾಪ್ತಿ ಆಗುವ ಸಮಗ್ರ ಆರೋಗ್ಯ ವಿಮೆಯ ಯೋಜನೆಯು ಅವರಿಗೆ ದೊರಕುವಂತಿರಬೇಕು.

## ಅಧ್ಯಾಯ 7

## ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ಪರಿಷತ್ತು

ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ಪರಿಷತ್ತು.

**16.** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮುಖಾಂತರ ಈ ಅಧಿನಿಯಮದ ಅಡಿಯಲ್ಲಿ ನೀಡಿರುವ ಅಧಿಕಾರಗಳನ್ನು ಮತ್ತು ಕಾರ್ಯಗಳನ್ನು ನಿರ್ವಹಿಸಲು ಒಂದು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ರಾಷ್ಟ್ರೀಯ ಪರಿಷತ್ತನ್ನು ರೂಪಿಸಬೇಕು.

(*2*) ಈ ರಾಷ್ಟ್ರೀಯ ಪರಿಷತ್ತಿನಲ್ಲಿ ಈ ಕೆಳಗಿನ ವ್ಯಕ್ತಿಗಳನ್ನು ಒಳಗೊಂಡಿರಬೇಕು –

(*a*) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಉಸ್ತುವಾರಿ ಕೇಂದ್ರ ಮಂತ್ರಿಗಳು ಪದಾಧಿಕಾರಿ ಅಧ್ಯಕ್ಷರಾಗಿರಬೇಕು, ಪದನಿಮಿತ್ತ (*ex officio*);

(*b*) ಸರ್ಕಾರದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಉಸ್ತುವಾರಿ ರಾಜ್ಯ ಮಂತ್ರಿಗಳು ಪದಾಧಿಕಾರಿ ಉಪ–ಅಧ್ಯಕ್ಷರಾಗಿರಬೇಕು, ಪದನಿಮಿತ್ತ (*ex officio*);

(*c*) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಉಸ್ತುವಾರಿ ಭಾರತ ಸರ್ಕಾರದ ಕಾರ್ಯದರ್ಶಿಗಳು ಪದಾಧಿಕಾರಿ ಸದಸ್ಯರಾಗಿರಬೇಕು, ಪದನಿಮಿತ್ತ (*ex officio*);

(*d*) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಗೃಹ ಸಚಿವಾಲಯ, ವಸತಿ ಮತ್ತು ನಗರಕ್ಕೆ ಸಂಬಂಧಿಸಿದ ಸಚಿವಾಲಯ, ಅಲ್ಪಸಂಖ್ಯಾತರ ಸಚಿವಾಲಯ, ಮಾನವ ಸಂಪನ್ಮೂಲ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ, ಕಾರ್ಮಿಕ ಮತ್ತು ಉದ್ಯೋಗ ಮತ್ತು ಕಾನೂನು ಇಲಾಖೆ, ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಮತ್ತು ಭಾರತದ ಬದಲಾವಣೆಯ ರಾಷ್ಟ್ರೀಯ ಸಂಸ್ಥೆಗಳ ಆಯೋಗದ ಪ್ರತಿಯೊಬ್ಬ ಪ್ರತಿನಿಧಿಗಳು ಮತ್ತು ಈ ಎಲ್ಲಾ ಪ್ರತಿನಿಧಿಗಳು ಭಾರತ ಸರ್ಕಾರಕ್ಕೆ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕೆಳಗಿನ ದರ್ಜೆಯವರಾಗಿರಬಾರದು. ಈ ಎಲ್ಲರೂ ಪರಿಷತ್ತಿನಲ್ಲಿ ಪದಾಧಿಕಾರಿ ಸದಸ್ಯರಾಗಿರಬೇಕು, ಪದನಿಮಿತ್ತ (*ex officio*);

(*e*) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ರಾಷ್ಟ್ರೀಯ ಮಹಿಳಾ ಆಯೋಗದಿಂದ ಒಬ್ಬೊಬ್ಬ ಪ್ರತಿನಿಧಿ ಇರಬೇಕು ಮತ್ತು ಈ ಪ್ರತಿನಿಧಿಗಳು ಭಾರತ ಸರ್ಕಾರಕ್ಕೆ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕೆಳಗಿನ ದರ್ಜೆಯವರಾಗಿರಬಾರದು. ಈ ಎಲ್ಲರೂ ಪರಿಷತ್ತಿನಲ್ಲಿ ಪದಾಧಿಕಾರಿ ಸದಸ್ಯರಾಗಿರಬೇಕು, ಪದನಿಮಿತ್ತ (*ex officio*);

(*f*) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಪ್ರತಿನಿಧಿಗಳನ್ನು ಸರದಿಯಲ್ಲಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಉತ್ತರ–ಪೂರ್ವ ವಲಯಗಳಿಂದ ಪ್ರತೀ ವಲಯದಿಂದ ಒಬ್ಬರನ್ನು ಪದಾಧಿಕಾರಿ ಸದಸ್ಯರಾಗಿ ನಾಮನಿರ್ದೇಶಿಸಬೇಕು, ಪದನಿಮಿತ್ತ (*ex officio*);

(*g*) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಐದು ಜನ ಟ್ರಾನ್ಸ್‌ಜೆಂಡರ್ ಸಮುದಾಯದ ಪ್ರತಿನಿಧಿಗಳನ್ನು ಸರದಿಯಲ್ಲಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಉತ್ತರ–ಪೂರ್ವ ವಲಯಗಳಿಂದ ಪ್ರತೀ ವಲಯದಿಂದ ಒಬ್ಬರನ್ನು ಸದಸ್ಯರಾಗಿ ನಾಮನಿರ್ದೇಶಿಸಬೇಕು;

(*h*) ಕೇಂದ್ರ ಸರ್ಕಾರವು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಕಲ್ಯಾಣಕ್ಕಾಗಿ ಕಾರ್ಯ ನಿರ್ವಹಿಸುವ ಸರ್ಕಾರೇತರ ಸಂಸ್ಥೆಗಳನ್ನು ಮತ್ತು ಸಂಘಟನೆಗಳನ್ನು ಪ್ರತಿನಿಧಿಸಲು ಐದು ತಜ್ಞರನ್ನು ಸದಸ್ಯರಾಗಿ ನಾಮನಿರ್ದೇಶಿಸಬೇಕು; ಮತ್ತು

(*i*) ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಕಲ್ಯಾಣಕ್ಕಾಗಿ ಕಾರ್ಯ ನಿರ್ವಹಿಸಲು ಪದಾಧಿಕಾರಿ ಸದಸ್ಯ–ಕಾರ್ಯದರ್ಶಿಗಳಾಗಿ, ಪದನಿಮಿತ್ತ (*ex officio*);

(3) ಈ ರಾಷ್ಟ್ರೀಯ ಪರಿಷತ್ತಿನ ಸದಸ್ಯರಲ್ಲಿ ಪದನಿಮಿತ್ತ (*ex officio*) ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರು ಕಚೇರಿಯನ್ನು ನಾಮನಿರ್ದೇಶಿಸಿದ ದಿನದಿಂದ ಮೂರು ವರ್ಷಗಳ ಅವಧಿಯ ತನಕ ಕಚೇರಿಯಲ್ಲಿ ಸದಸ್ಯ ಹುದ್ದೆಯಲ್ಲಿ ಇರುತ್ತಾರೆ.

ಪರಿಷತ್ತಿನ ಕಾರ್ಯ ಚಟುವಟಿಕೆಗಳು

**17.** ರಾಷ್ಟ್ರೀಯ ಪತಿಷತ್ತು ನಿರ್ವಹಿಸಬೇಕಾದ ಕಾರ್ಯಗಳು ಈ ಕೆಳಗೆ ಹೆಸರಿಸಿದೆ :–

(*a*) ಕೇಂದ್ರ ಸರ್ಕಾರಕ್ಕೆ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಸಂಬಂಧಿಸಿದ ನೀತಿಗಳನ್ನು, ಕಾರ್ಯಕ್ರಮಗಳನ್ನು, ಶಾಸನಗಳನ್ನು ಮತ್ತು ಯೋಜನೆಗಳನ್ನು ರೂಪಿಸಲು ಸಲಹೆಗಳನ್ನು ನೀಡುವುದು;

(*b*) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಸಮಾನತೆಯನ್ನು ಮತ್ತು ಸಂಪೂರ್ಣ ಭಾಗವಹಿಸುವಿಕೆಯನ್ನು ಸಾಧಿಸಲು ರೂಪಿಸಿದ ನೀತಿಗಳ ಮತ್ತು ಕಾರ್ಯಕ್ರಮಗಳ ಪರಿಣಾಮಗಳನ್ನು ಮೇಲ್ವಿಚಾರಣೆ ಮತ್ತು ವಿಮರ್ಶೆ ನಡೆಸುವುದು;

(*c*) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ನಿಭಾಯಿಸುವ ಎಲ್ಲಾ ಸರ್ಕಾರದ ಇಲಾಖೆಗಳ ಮತ್ತು ಇತರ ಸರ್ಕಾರದ ಮತ್ತು ಸರ್ಕಾರೇತರ ಸಂಸ್ಥೆಗಳ ಕಾರ್ಯಕ್ರಮಗಳನ್ನು ಪರಿಶೀಲಿಸುವುದು ಮತ್ತು ಸಂಯೋಜಿಸುವುದು;

(*d*) ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ದೂರುಗಳನ್ನು ಪರಿಹಾರಗಳ ನಿರ್ವಹಣೆ ಮಾಡುವುದು; ಮತ್ತು

(*e*) ಕೇಂದ್ರ ಸರ್ಕಾರವು ನಿರ್ದೇಶಿಸಿದ ಯಾವುದೇ ಇತರ ಕಾರ್ಯಗಳನ್ನು ನಿರ್ವಹಿಸುವುದು.

## ಅಧ್ಯಾಯ 8

## ಅಪರಾಧಗಳು ಮತ್ತು ದಂಡಗಳು

ಅಪರಾಧಗಳು ಮತ್ತು ದಂಡಗಳು

**18.** ಯಾರಾದರೂ, :–

(*a*) ಸರ್ಕಾರ ಸಾರ್ವಜನಿಕರ ಉದ್ದೇಶಕ್ಕಾಗಿ ಹೇರಿದ ಕಡ್ಡಾಯ ಸೇವೆಗಳನ್ನು ಹೊರತು ಪಡಿಸಿ, ಟ್ರಾನ್ಸ್‌ಜೆಂಡರ್ ವ್ಯಕ್ತಿಯನ್ನು ಬಲವಂತದಿಂದ ಅಥವಾ ಯಾವುದೇ ರೀತಿಯ ಬಂಧಿತ ಕೆಲಸಕ್ಕೆ ಒತ್ತಾಯಿಸಿದಲ್ಲಿ ಅಥವಾ ಪ್ರಲೋಭಿಸಿದ್ದಲ್ಲಿ;

*b*) ಟ್ರಾನ್ಸ್‌ಜೆಂಡರ್ ವ್ಯಕ್ತಿಯನ್ನು ಸಾರ್ವಜನಿಕ ಸ್ಥಳಕ್ಕೆ ಪ್ರವೇಶವನ್ನು ನಿರಾಕರಿಸಿದ್ದಲ್ಲಿ ಅಥವಾ ಸಾರ್ವಜನಿಕ ಸೇವೆಗಳನ್ನು ಬಳಸುವಲ್ಲಿ ಅಥವಾ ಇತರ ಸದಸ್ಯರಿಗೆ ಸಾರ್ವಜನಿಕ ಸ್ಥಳವನ್ನು ಬಳಸುವ ಅವಾಕಾಶಗಳಿದ್ದು ಅಂತಹ ವ್ಯಕ್ರಿ ಅನುಗಳನ್ನು ಬಳಸುವಾಗ ನಿರಾಕರಿಸಿದ್ದಲ್ಲಿ ಅಥವಾ ಅಡ್ಡಿ ಮಾಡಿದ್ದಲ್ಲಿ;

(*c*) ಟ್ರಾನ್ಸ್‌ಜೆಂಡರ್ ವ್ಯಕ್ತಿಯನ್ನು ಬಲವಂತದಿಂದ ಅಥವಾ ಈ ಪರಿಣಾಮಗಳಿಂದ ಅವರನ್ನು ಮನೆಯಿಂದ, ಹಳ್ಳಿಯಿಂದ ಅಥವಾ ಇತರ ವಾಸ ಮಾಡುವ ಸ್ಥಳದಿಂದ ಬಿಟ್ಟು ಹೋಗುವಂತೆ ಮಾಡಿದ್ದಲ್ಲಿ; ಮತ್ತು

(*d*) ಟ್ರಾನ್ಸ್‌ಜೆಂಡರ್ ವ್ಯಕ್ತಿಗೆ ಹಲ್ಲೆ ಅಥವಾ ಗಾಯ ಅಥವಾ ಮಾನಸಿಕ ಅಥವಾ ದೈಹಿಕವಾಗಿ ಜೀವಕ್ಕೆ, ಸುರಕ್ಷೆಗೆ, ಆರೋಗ್ಯಕ್ಕೆ ಅಪಾಯ ತಂದಲ್ಲಿ ಅಥವಾ ದೈಹಿಕವಾಗಿ, ಲೈಂಗಿಕವಾಗಿ, ಮೌಖಿಕವಾಗಿ ಅಥವಾ ಭಾವನಾತ್ಮಕವಾಗಿ ಅಥವಾ ಆರ್ಥಿಕವಾಗಿ ಶೋಷಣೆಗಳನ್ನು ಒಳಗೊಂಡತೆ ಕೃತ್ಯ ನಡೆಸಿದ್ದಲ್ಲಿ, ಅಪರಾಧಿಗಳು ಕನಿಷ್ಟ ಆರು ತಿಂಗಳ ವರೆಗೆ ಜೈಲು ಶಿಕ್ಷೆಗೆ ಗುರಿಯಾಗುವುದು ಅಲ್ಲದೇ ಜೈಲು ಶಿಕ್ಷೆಯ ಅವಧಿಯು ಎರಡು ವರ್ಷದವರೆಗೂ ವಿಸ್ತರಿಸಬಹುದು ಮತ್ತು ದಂಡಕ್ಕೂ ಗುರಿಯಾಗಬಹುದು.

## ಅಧ್ಯಾಯ 9

## ಇತ್ಯಾದಿಗಳು

**19.** ಈ ಪರವಾಗಿ ಸಂಸತ್ತು ಕಾನೂನಿನ ಮೂಲಕ ಅಧಿನಿಯಮಕ್ಕಾಗಿ ಲೆಕ್ಕವಿನಿಯೋಗವನ್ನು ಸರಿಯಾಗಿ ಮಾಡಿದ ನಂತರ ಕೇಂದ್ರ ಸರ್ಕಾರವು ಕಾಲಕಾಲಕ್ಕೆ, ಈ ಅಧಿನಿಯಮದ ಉದ್ದೇಶಗಳನ್ನು ನಿರ್ವಹಿಸಲು ಅಗತ್ಯವಾದ ಮೊತ್ತವನ್ನು ರಾಷ್ಟ್ರೀಯ ಮಂಡಳಿಗೆ ಜಮಾ ಮಾಡತಕ್ಕದ್ದು. ಕೇಂದ್ರ ಸರ್ಕಾರದ ಅನುದಾನ

**20.** ಈ ಅಧಿನಿಯಮದ ನಿಬಂಧನೆಗಳು ಪ್ರಸ್ತುತ ಸಮಯದಲ್ಲಿ ಜಾರಿಯಲ್ಲಿರುವ ಕಾನೂನುಗಳಲ್ಲಿ ಸೇರ್ಪಡೆಗೊಳ್ಳಬೇಕು ಹೊರತು ಅವುಗಳ ಅವಹೇಳನ ಮಾಡುವಂತಿರಬಾರದು. ಅಧಿನಿಯಮ ಬೇರೆ ಕಾನೂನಿನ ವಿರುದ್ಧ ಇಲ್ಲ

**21.** ಸಮುಚಿತ ಸರ್ಕಾರವಾಗಲೀ ಅಥವಾ ಯಾವುದೆ ಸ್ಥಳೀಯ ಪ್ರಾಧಿಕಾರವಾಗಲೀ ಅಥವಾ ಸರ್ಕಾರದ ಯಾವುದೇ ಅಧಿಕಾರಿಯಾಗಲೀ ಈ ಅಧಿನಿಯಮ ಮತ್ತು ಅಧಿನಿಯಮದ ಅಡಿಯಲ್ಲಿ ಮಾಡಿರುವ ನಿಯಮ ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಉತ್ತಮ ನಂಬಿಕೆಯ ಉದ್ದೇಶದಿಂದ ಅಥವಾ ಅಧಿನಿಯಮ ಮತ್ತು ಅಧಿನಿಯಮದ ಅಡಿಯಲ್ಲಿ ಮಾಡಿರುವ ನಿಯಮದ ಉದ್ದೇಶಗಳಿಗೆ ಅನುಸಾರವಾಗಿ ಮಾಡಿದ್ದಲ್ಲಿ ಅವರ ವಿರುದ್ಧವಾಗಲೀ ಯಾವುದೇ ಮೊಕದ್ದಮೆ, ಕಾನೂನು ಕ್ರಮ ಅಥವಾ ಇತರ ಕಾನೂನುಬದ್ಧ ದಾವೆಗಳನ್ನು ಹೂಡುವಂತಿಲ್ಲ. ರಕ್ಷಣಾತ್ಮಕ ಕ್ರಮಗಳನ್ನು ಒಳ್ಳೆಯ ಉದ್ದೇಶದಿಂದ ಕೈಗೊಳ್ಳುವುದು

**22.** (*1*) ಸಮುಚಿತ ಸರ್ಕಾರವು, ಹಿಂದಿನ ಪ್ರಕಟಣೆಯ ಸ್ಥಿತಿಗೆ ಒಳಪಟ್ಟಂತೆ, ಅಧಿಸೂಚನೆಯ ಮುಖಾಂತರ ಈ ಅಧಿನಿಯಮದ ನಿಬಂಧನೆಗಳನ್ನು ಪಾಲಿಸಲು ನಿಯಮಗಳನ್ನು ರೂಪಿಸಬಹುದು. ನಿಯಮಗಳನ್ನು ರೂಪಿಸಲು ಸೂಕ್ತ ಸರ್ಕಾರಕ್ಕೆ ಇರುವ ಅಧಿಕಾರಗಳು

(*2*) ಹಿಂದಿನ ಅಧಿಕಾರಗಳನ್ನು ಅವಗಣನೆ ಮಾಡದೇ ಮತ್ತು ಸಾಮಾನ್ಯಕರಣಗೊಳಿಸದೇ ಅಂತಹ ನೀತಿಗಳು ಎಲ್ಲರಿಗೂ ಅನ್ವಯವಾಗುವ ಅಥವಾ ಈ ಕೆಳಗಿನ ವಿಷಯಗಳಿಗೆ ಅನ್ವಯಿಸಬಹುದು, ಅವುಗಳೆಂದರೆ :–

(*a*) ಪರಿಛೇದ 5ರ ಅಡಿಯಲ್ಲಿ ಅರ್ಜಿ ಸಲ್ಲಿಸಲು ಇರುವ ಕ್ರಮ ಮತ್ತು ರೀತಿಗಳು;

(*b*) ಪರಿಛೇದ 6ರ ಉಪ–ಪರಿಛೇದ (1) ರ ಅಡಿಯಲ್ಲಿನ ಕಾರ್ಯ ವಿಧಾನ, ಕ್ರಮ ಮತ್ತು ರೀತಿಗಳ ಮತ್ತು ಅವಧಿಯ ಒಳಗೆ ನೀಡಿಲಾಗುವ ಗುರುತಿನ ಪ್ರಮಾಣ ಪತ್ರ;

(*c*) ಪರಿಛೇದ 7ರ ಉಪ–ಪರಿಛೇದ (1) ರ ಅಡಿಯಲ್ಲಿ ಅರ್ಜಿಸಲ್ಲಿಸಲು ಇರುವ ಕ್ರಮ ಮತ್ತು ರೀತಿಗಳು;

(*d*) ಪರಿಛೇದ 7ರ ಉಪ–ಪರಿಛೇದ (2) ರ ಅಡಿಯಲ್ಲಿ ಪರಿಷ್ಕೃತ ಅರ್ಜಿಸಲ್ಲಿಸಲು ಇರುವ ನಮೂನೆ, ವಿಧಾನ ಮತ್ತು ಅವಧಿ;

(*e*) ಪರಿಛೇದ 8ರ ಉಪ–ಪರಿಛೇದ (2) ರ ಅಡಿಯಲ್ಲಿ ಕಲ್ಯಾಣ ಕ್ರಮಗಳನ್ನು ಒದಗಿಸುವುದು;

(*f*) ಪರಿಛೇದ 10ರ ಅಡಿಯಲ್ಲಿ ನೀಡಬೇಕಾದ ಸೌಲಭ್ಯಗಳು;

(*g*) ಪರಿಛೇದ 17ರ ಷರತ್ತು (ಇ) ಅಡಿಯಲ್ಲಿನ ರಾಷ್ಟ್ರೀಯ ಪರಿಷತ್ತಿನ ಇತರ ಹುದ್ದೆಗಳು; ಮತ್ತು

(*h*) ಅವಶ್ಯಕತೆ ಇರುವ ಅಥವಾ ನಿರ್ದೇಶಿಸಿದ ಇತರ ಯಾವುದೇ ವಿಷಯಗಳನ್ನು ನಿರ್ವಹಿಸುವುದು.

(*3*) ಕೇಂದ್ರ ಸರ್ಕಾರವು ಉಪ–ಪರಿಛೇದ (1) ರ ಅಡಿಯಲ್ಲಿ ರೂಪಿಸಿದ ಪ್ರತಿಯೊಂದು ನಿಯಮಗಳನ್ನು ಇದನ್ನು ರೂಪಿಸಿದ ತಕ್ಷಣದ ನಂತರ ಪ್ರತಿಯೊಂದು ಸಂಸತ್ತ್ ಸದನದ ಮುಂದೆ ಅದರ ಅಧಿವೇಶನಗಳಲ್ಲಿ ಅದನ್ನು ಇಡಬೇಕಾಗಿದ್ದು, ಒಂದೇ ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಸಸತ ಅಧಿವೇಶಗಳಲ್ಲಿ ಒಟ್ಟಾರೆ ಮೂವತ್ತು ದಿನಗಳ ವರೆಗೆ ರೂಪಿಸಿದ ನಿಯಮಗಳನ್ನು ಇಡಬೇಕಾಗಿರುತ್ತದೆ. ಒಂದು ವೇಳೆ ಅಧಿವೇಶನದ ಅವಧಿ ಮುಗಿದಲ್ಲಿ ಕೂಡಲೇ ಮುಂದಿನ ಅಧಿವೇಶನದಲ್ಲಿ ಅಥವಾ ಸತತ ಅವಧಿಗಳ ನಂತರ ಇಡಬೇಕಾಗಿದ್ದು ನಿಯಮದಲ್ಲಿ ಏನೇ ಬದಲಾವಣೆಗಳನ್ನು ಮಾಡಬೇಕಾದಲ್ಲಿ ಎರಡೂ ಮಂಡಲಗಳು ಒಪ್ಪಿಕೊಳ್ಳಬೇಕು ಮತ್ತು ಈ ರೀತಿ ತೀರ್ಮಾನಿಸಿದಾಗ ಮಾತ್ರ ಈ ನಿಯಮಗಳಿಗೆ ಸೂಚಿಸಿದ ಬದಲಾವಣೆಗಳು ಕೂಡಲೇ ಅನ್ವಯವಾಗುತ್ತದೆ. ಎರಡೂ ಮಂಡಲಗಳು ಒಪ್ಪಿಕೊಂಡು ನಿಯಮವನ್ನು ಮಾಡಬಾರದು ಎಂದು ತೀರ್ಮಾನಿಸಿದಾಗ ಈ ನಿಯಮಗಳು ಜಾರಿಗೆ ಬರುವುದಿಲ್ಲ, ಹೀಗಿದ್ದರೂ ನಿಯಮಕ್ಕೆ ಯಾವುದೇ ಬದಲಾವಣೆ ಅಥವಾ ರದ್ದು ಮಾಡದಿದ್ದಲ್ಲಿ ಪೂರ್ವಾಗ್ರಹವಿಲ್ಲದೇ ಹಿಂದಿನ ನಿಯಮಗಳು ಜಾರಿಗೆ ಬರುತ್ತವೆ.

(*4*) ರಾಜ್ಯ ಸರ್ಕಾರವು ಉಪ–ಪರಿಛೇದ (1) ರ ಅಡಿಯಲ್ಲಿ ರೂಪಿಸಿರುವ ಪ್ರತಿಯೊಂದು ನಿಯಮಗಳನ್ನು, ಇದನ್ನು ರೂಪಿಸಿದ ತಕ್ಷಣದ ನಂತರ ವಿಧಾನ ಮಂಡಲದಲ್ಲಿ ಎರಡು ಮಂಡಲಗಳಿದ್ದಲ್ಲಿ ಪ್ರತಿಯೊಂದು ಮಂಡಲದ ಸದನದ ಮುಂದೆ ಇಡಬೇಕಾಗುತ್ತದೆ ಅಥವಾ ವಿಧಾನ ಮಂಡಲದಲ್ಲಿ ಒಂದು ಮಂಡಲವಿದ್ದಲ್ಲಿ ಆ ಮಂಡಲದ ಸದನದಲ್ಲಿ ಇಡಬೇಕಾಗುತ್ತದೆ.

**23.** (*1*) ಈ ಕಾಯೆಯ ನಿಬಂಧನೆಗಳನ್ನು ಜಾರಿಗೆ ತರುವಲ್ಲಿ ತೊಂದರೆಗಳು ಕಂಡು ಬಂದಲ್ಲಿ, ಕೇಂದ್ರ ಸರ್ಕಾರವು ಅಧಿಕೃತ ಗಜೆಟ್ ಅಧಿಸೂಚನೆಯ ಮುಖಾಂತರ ಆದೇಶವನ್ನು ಪ್ರಕಟಿಸಿ ಈ ಅಧಿನಿಯಮದಲ್ಲಿರುವ ಅಸಮಂಜಸವನ್ನು ನಿರ್ವಾರಿಸುವ ಅಗತ್ಯವಿದೆ ಎಂದು ತಿಳಿದಲ್ಲಿ ಅಥವಾ ತೊಂದರೆಗಳನ್ನು ಕೂಡಲೇ ನಿವಾರಿಸಲು ತಿಸಿದ್ದಲ್ಲಿ ಈ ಅನುಕೂಲವನ್ನು ಕಲ್ಪಿಸಬಹುದು: ತೊಂದರೆಗಳನು ನಿವಾರಿಸಲು ಇರುವ ಅಧಿಕಾರಗಳು

ಹಾಗಾದ ಪಕ್ಷದಲ್ಲಿ ಈ ಅಧಿನಿಯಮದ ಪ್ರಾರಂಭದ ನಂತರ ಮುಕ್ತಾಯ ಅವಧಿಯ ಎರಡು ವರ್ಷಗಳ ನಂತರ ಯಾವುದೇ ಬದಲಾವಣೆಯ ಆದೇಶವನ್ನು ಮಾಡುವ ಹಾಗಿಲ್ಲ.

(*2*) ಈ ಪರಿಚ್ಛೇದದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಈ ಆದೇಶ ಮಾಡಿದ ತಕ್ಷಣದ ನಂತರ ಸಂಸತ್ತ್ ಸದನದ ಪ್ರತಿಯೊಂದು ಮಂಡಲದ ಮುಂದೆ ಇಡಬೇಕಾಗುತ್ತದೆ.

---

ಡಾ. ಜಿ. ನಾಯಾಯಣ ರಾಜು,
*ಭಾರತ ಸರ್ಕಾರದ ಕಾರ್ಯದರ್ಶಿ*